3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.158/2021**

ಪ್ರಾಸಾ 9

ಚಾಸಾ 19

| | |
|---|---|
| ಹೆಸರು | ಡಿ ಎಸ್ ರಮೇಶ್ |
| ತಂದೆಯ ಹೆಸರು | ಡಿ ಎಸ್ ಭಾಷಂ |
| ವಯಸ್ಸು | 57 ವರ್ಷ |
| ಉದ್ಯೋಗ | ಸಹಾಯಕ ಕಾರ್ಯಪಾಲಕ ಇಂಜಿನಿಯವರ್, ಸಿರಾ ಲೋಕೋಪಯೋಗಿ ಇಲಾಖೆ |
| ವಾಸಸ್ಥಳ | ತುಮಕೂರು |

ಸಾಕ್ಷಿಯನ್ನು ದಿನಾಂಕ 10.02.2026 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ನಾನು 2013 ರಿಂದ 2021 ರವರೆಗೆ ನಾನು ಮಧುಗಿರಿ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಇಂಜಿನಿಯರ್ ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2) 26.11.2019 ರಂದು ಮಧುಗಿರಿ ಡಿವೈಎಸ್‌ಪಿರವರ ಕಚೇರಿಯಿಂದ ಸ್ಥಳದ ನಕ್ಷೆ ತಯಾರಿಸಿಕೂಡುವಂತೆ ಮನವಿಯನ್ನು ಪಡೆದುಕೊಂಡಿರುತ್ತೇವೆ. ಅದರಂತೆ ನಾನು ದಿಃ 28.112019 ರಂದು ಮಿಡಿಗೇಶಿ ಪೊಲೀಸ್ ಠಾಣೆಯ ನರಸಿಂಹಯ್ಯರವರು ನನ್ನನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತಾರೆ. ನಂತರ ನಾನು ಸ್ಥಳದ ನಕ್ಷೆಯನ್ನು ತಯಾರಿಸಿಕೊಂಡಿರುತ್ತೇನೆ. ನಂತರ ದಿಃ29.11.2019 ರಂದು ನಕ್ಷೆಯನ್ನು ನಮ್ಮ ಕಚೇರಿ ಮೂಲಕ ಸಲ್ಲಿಸಿರುತ್ತೇನೆ. ನಕ್ಷೆಯನ್ನು ನಿಪಿ.10 ಎಂದು, ಸಾಕ್ಷಿಯ ಸಹಿಯನ್ನು ನಿಪಿ.10(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ಶ್ರೀ.B.K.P.S. ವಕೀಲರಿಂದ :**

6) ಬಸ್ತಪ್ಪರವರಿಗೆ ಮನೆಯು ಸೇರಿರುತ್ತದೆ ಎಂದು ದಾಖಲಾತಿಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ಆ ಮನೆಯ ವಿಸ್ತೀರ್ಣ ಮತ್ತು ದಾಖಲಾತಿಗಳು ಯಾರ ಹೆಸರಿನಲ್ಲಿರುತ್ತದೆ ಎಂದು ನಾನು ನಕ್ಷೆಯಲ್ಲಿ ನಮೂದಿಸಿರುವುದಿಲ್ಲ. ನಿಪಿ.10 ರಲ್ಲಿ ಕಂಪ್ಯೂಟರ್ ನಲ್ಲಿ ಟೈಪ್ ಮಾಡಿರುವ ವಿಷಯಗಳನ್ನು ಕಚೇರಿಯಲ್ಲಿ ಮಾಡಿಕೊಂಡಿರುತ್ತೇನೆ. ಆ ಬಗ್ಗೆ ನಕ್ಷೆಯಲ್ಲಿ ನಮೂದಿಸಿರುವುದಿಲ್ಲ. ದಿಃ 26.11.2019 ರಂದು ಡಿವೈಎಸ್‌ಪಿರವರು ನಮಗೆ ನೀಡಿರುವ ಮನವಿಯನ್ನು ಹೊರತುಪಡಿಸಿ ಬೇರೆ ಯಾವುದೇ ಮನವಿಯನ್ನು ಕೊಟ್ಟಿಲ್ಲ. ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ಡಿವೈಎಸ್‌ಪಿರವರಿಗೆ ಸಲ್ಲಿಸಿರುವ ಪತ್ರದಲ್ಲಿ ಉಲ್ಲೇಖ 2 ರಲ್ಲಿ ದಿಃ23.11.2019 ರಂದು ಮನವಿ ಸ್ವೀಕರಿಸಿಕೊಳ್ಳಲಾಗಿದೆ ಎಂದು ಬರೆದಿದ್ದು ಅದನ್ನು ನನಗೆ ಕೊಟ್ಟಿರುವುದಿಲ್ಲ. ಮನವಿ ಪತ್ರದಲ್ಲಿ ಮಿಡಿಗೇಶಿ ಪೋಲೀಸ್ ಠಾಣೆಯ ಸಿಬ್ಬಂದಿ ನರಸಿಂಹಯ್ಯರವರನ್ನು ನಿಯೋಜನೆ ಮಾಡಲಾಗಿದೆ ಎಂದು ನಮೂದಿಸಿಲ್ಲ. ಸ್ಥಳವನ್ನು ತೋರಿಸಲು ಯಾರನ್ನಾದರೂ ನಿಯೋಜನೆ ಮಾಡಬೇಕೆಂದು ನಾನು ಯಾವುದೇ ಪತ್ರ ವ್ಯವಹಾರವನ್ನು ಮಾಡಿರುವುದಿಲ್ಲ, ಆದರೆ ನಾನು ಡಿವೈಎಸ್‌ಪಿರವರ ಕಚೇರಿಗೆ ದಿಃ28.11.2019 ರಂದು ಬೆಳಿಗ್ಗೆ ಕರೆ ಮಾಡಿ ಸಿಬ್ಬಂದಿಯನ್ನು ಕಳುಹಿಸುವಂತೆ ಕೇಳಿದ್ದೆ. ನರಸಿಂಹಯ್ಯರವರು ಡಿವೈಎಸ್‌ಪಿರವರ ಕಚೇರಿಯಲ್ಲಿ ನಿರ್ವಹಿಸುವ ಸಿಬ್ಬಂದಿ ಅಲ್ಲ ಎಂದರೆ ಸರಿಯಲ್ಲ. ನರಸಿಂಹಯ್ಯರವರು ಸ್ಥಳಕ್ಕೆ ಬಂದಿರಲಿಲ್ಲ ಮತ್ತು ಡಿವೈಎಸ್‌ಪಿರವರ ಕಚೇರಿಯಲ್ಲಿ ನಾನು ನಕ್ಷೆಯನ್ನು ತಯಾರಿಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಕ್ಷೆಯಲ್ಲಿ ಮನೆಯು ಬಸ್ತಪ್ಪರವರಿಗೆ ಸೇರಿರುತ್ತದೆ ಎಂದು ತೋರಿಸಲು ಮನೆಯ ಖಾತಾ ನಂಬರ್ ಆಗಲೀ , ಮನೆಯ ಒಟ್ಟು ವಿಸ್ತೀರ್ಣವನ್ನಾಗಲೀ ನಮೂದಿಸಿಲ್ಲ ಎಂದರೆ

ಸರಿಯಲ್ಲ. ಡಿವೈಎಸ್‌ಪಿರವರ ಮಾತನ್ನು ಕೇಳಿಕೊಂಡು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ